ಇಲ್ಲದ ನಮ್ಮ ಚಿಕ್ಕಿಯ ನಿಸ್ವಾರ್ಥ ದುಡಿಮೆ ಕಂಡು ನನಗಂತೂ ಅಯ್ಯೋ ಅನಿಸುತ್ತಿತ್ತು.

ನಾನು ಹೇಳಿ ಕೇಳೀ ಅಮ್ಮನ ಮಗ. ಮುಂಜಾವಿನಿಂದ ಅಮ್ಮ ನಗ್ತಾ ಇದ್ದಿದ್ರಿಂದ ಮೇಲಾಗಿ ಮನೆ ಕಡೆ ನಂಗೆ ಅಂಥಾ ತಲೆ ಹೋಗೋ ಕೆಲ್ಸ ಯಾವ್ದೂ ಇಲ್ದಿದ್ರಿಂದ ಲೈಬ್ರರಿ ಕಡೆ ಹೊರಟೆ. ಆಗಲೇ ಅಪ್ಪನೂ ಏನೋ ಕೆಲಸ ಅದೆ ಅಂತ ಹೊರಗ್ಹೋದ್ರು.

ಲೈಬ್ರರಿಯಿಂದ ಹೊರಬಂದಾಗ ಆಕಾಶದಲ್ಲಿ ಮೋಡ ಕಟ್ಟುತ್ತ ಎಲ್ಲೆಡೆ ಮೆಲ್ಲಮೆಲ್ಲನೆ ಕತ್ತಲಾವರಿಸುತ್ತಿತ್ತು. ಬೇಗ ಮನೆ ಸೇರಿಕೊಳ್ಳೋಣೆಂದು ಸೈಕಲ್ ಸ್ಟ್ಯಾಂಡ್ ತೆಗೆದು ಮುಂದೆ ತಳ್ಳಹೋದ್ರೆ ಸೈಕಲ್ ಪಂಕ್ಚರ್ರು! ಇನ್ನು ಅರ್ಧದಾರಿಯವರೆಗೆ ಯಾವುದೇ ಸೈಕಲ್ ದುರಸ್ತಿ ಅಂಗಡಿ ಇಲ್ಲದ್ರಿಂದ ಅದನ್ನು ದೊಭ್ಗೆಂತ ಬಡಬಡ ಹೆಜ್ಜೆ ಹಾಕತೊಡಗಿದೆ.

'ನಿಂಗೆ ಹೇಳೋರು ಕೇಳೋರು ಯಾರಿಲ್ಲೇನು? ಎಲ್ಲಿ ಹಾಳಾಗಿ ಹೋಗಿದ್ದಿ. ಅದೇ ಆ ಹಾಳು ಲೈಬ್ರೆರಿಗಲ್ಲೇನು? ಅಲ್ಲಿ ಅಮ್ಮಾ ನೋಡಿದ್ರೆ ಒದ್ದಾಡಿ ಸಾಯ್ತಿದ್ದಾಳೆ. ಊಟ ಕೂಡ ಸರಿಗ್ಮಾಡಿಲ್ಲ. ಅಪ್ಪನೂ ಮನೀಗ್ಬಂದಿಲ್ಲ. ಅದೇನಾಗೈದೆ ಸ್ವಲ್ಪ ಹೋಗಿ ನೋಡು' ಅಂತ ಬಾಗಿಲಲ್ಲೇ ಎದುರುಗೊಂಡ ಅಕ್ಕ ನಂಗೆ ಸಹಸ್ರ ನಾಮಾರ್ಚನೆ ಮಾಡಿದ್ಲು.

ಪಡಸಾಲೆಯಲ್ಲಿ ಗೋಡೆ ಅಂಚಿಗೆ ಅಮ್ಮ ಮಲಗಿದ್ದ ಜಾಗಕ್ಕೆ ಹೋಗುವ ಮೊದಲೇ ದಟ್ಟವಾಗಿ ಅಮೃತಾಂಜನದ ವಾಸನೆ ಮೂಗಿಗಡರುತ್ತಿತ್ತು.

'ಅಮ್ಮ ಯಾಕಮ್ಮ ಹೀಗ್ ಮಲಿಗಿ? ಊಟ ಕೂಡ ಸರೀಗ್ ಮಾಡ್ಲಿಲ್ಲಂತೆ. ಏನಾಗೆದೆ. ಮಯ್ಯಾಗ್ನೆಟಗಿಲ್ಲೇನು...?'

'ಈಗ ನಿದ್ದೆ ಹತ್ತಾ ಇತ್ತು. ಅಂಥಾದ್ದೇನೂ ಆಗಿಲ್ಲ. ನಾ ನೆಟ್ಟಗೇ ಇದ್ದೀನಿ. ನಿಂದೂಟಾಯ್ತೆನೋ. ಮಜ್ಜಿಗೆ ಪಳದ್ಯ ಒಳ್ಳೆ ರುಚಿಯಾಗಿತ್ತು. ಭೇಷ್ ಉಣ್ಣಬೇಕಾಗಿತ್ತು.' ಅವಳ ಕಕ್ಕುಲಾತಿ ಕಂಡು ಒಂದು ಕ್ಷಣ ಮಾತು ಬಾರದವನಾಗಿ ಸ್ವಲ್ಪ ಹೊತ್ತು ಸುಮ್ಮನೆ ಕೂತೆ.

ಆಗ ಅಪ್ಪ ಒಳಗೆ ಬಂದ್ರು. 'ಅಪ್ಪಾ ಈಗ ಬರ್ತಿದ್ಯಾ. ಅಮ್ಮ ನೋಡು ಹ್ಯಾಗ್ ಒದ್ದಾಡ್ತಿದ್ದಾಳೆ. ಏನಾಗಿದೆ ಅಂದ್ರೆ ಹೇಳುವಲ್ಲು. ನೀನಾದ್ರೂ ಕೇಳು.'

'ಏನಿಲ್ಲ ದೇವ್ರು, ಯಾರ್ ಕೇಳಿದ್ರೂ ಅಷ್ಟೆ. ಯಾಕೋ ಇಲ್ಲಿ ಸ್ವಲ್ಪ ಎದ್ಯಾಗೆ ಚುಚ್ಚಿದಾಂಗಾಗ್ತಾ ಅದೆ. ಅಮೃತಾಂಜ್ನ ಹಚ್ಚೀನಿ. ಸ್ವಲ್ಪ ಬೆಚ್ಚಗೆ ಕಾವು ಕೊಟ್ಟಂದ್ರೆ ಸರಿ ಹೋಗ್ತದೆ. ಮೇಲಾಗಿ ನಮನ್ನ ಕಾಯೋ ದೇವ್ರು ಮ್ಯಾಲಿದ್ದಾನೆ.'

ನಂಗೆ ಸಿಟ್ಟು ಬಂತು. ಅಮ್ಮನನ್ನು ಹೀಗೆ ಬಿಟ್ರೆ ಸರಿ ಹೋಗಲ್ಲ ಅನಿಸಿ, 'ಅಮ್ಮಾ ನಾ ಈಗ್ಲೇ ಹೋಗಿ ಆ ಮದ್ರಾಸ್ ಡಾಕ್ಟ್ರನ್ನ ಕರ್ಕಂಬರ್ತೀನಿ. ನೀ ಬ್ಯಾಡ ಅನ್ಬೇಡ. ಅವ್ರು ಬರಲ್ಲ ಅಂದ್ರೆ ಬಾಯಿಗೆ ಬಂದ್ಹಾಗೆ ಬೈದು ಗಲಾಟೆ ಮಾಡ್ತೀನಿ ಏನಂತ ತಿಳ್ಕೊಂಡನಾತ...' ಕೂಗಾಡಿದೆ.

'ಬ್ಯಾಡ ದೇವ್ರು... ನಮ್ಗೆ ದುಷ್ಟತನ ಬ್ಯಾಡಪ್ಪ. ಮೇಲಾಗಿ ಅವ್ರು ಊರಾಗಿಲ್ಲಂತೆ. ನಂಗೇನಾಗಿಲ್ಲ, ನೀ ಸುಮ್ನೇ ಆ ಕಡೆ ಹೋಗಿ ಏನಾದರೂ ಓದೋದೋ ಬರಿಯೋದೋ ಮಾಡಿಕೊ.'

ಮಧ್ಯಾಹ್ನ ಮುಸುಕಿದ ಮೋಡ ಮತ್ತಷ್ಟು ದಟ್ಟವಾಗಿ ಮಳೆ ಶುರುವಾಯಿತು. ಪಡಸಾಲೆಯಲ್ಲಿ ನೋಡಿದ್ರೆ ಅಮ್ಮ ಸಣ್ಣದಾಗಿ ನರಳತಿರೋದು ಕೇಳಿಸ್ತು. ನಂಗೆ ಭಾಳ ಭಯ ಆಯ್ತು.

'ದೇವ್ರೂ ಯಾಕೋ ವಿಪರೀತ ನೋಯ್ತಾ ಅದೆ. ಒಳ್ಳೆ ಸೂಜಿ ಚುಚ್ಚಿದ್ಹಂಗಾಗ್ತಾ ಅದೆ.'

'ಅಮ್ಮಾ ಭಾಳ ಸೆಕೆ ಅನಿಸ್ತದಾ, ಬೆವರ್ತಾ ಅದಾ...' ಕೇಳಿದೆ. 'ಇಲ್ಲ' ಅಂತ ಹಾಗೇ ಕಣ್ಮುಚ್ಚಿ ಮಲಗಿದಳು. ಫ್ಯಾನ್ ಜೋರು ಮಾಡಿದೆ. ನಿದ್ದೆ ಹತ್ತಿರ್ಬೇಕು. ನಾ ಹೊರಗೆ ಹೋದೆ. ಮಳೆ ಇನ್ನೂ ಜೋರಾಯಿತು. ಮಿಂಚು ಗುಡುಗು ಸಿಡಿಲು. ಜೊತೆಗೆ ಭರೋ ಅಂತ ಬೀಸೋ ಗಾಳಿ!

'ಅಪ್ಪಾ ಯಾಕೋ ಭಾಳ ಭಯ ಆಗ್ತದೆ! ಅಮ್ಮಗೇನಾದ್ರೂ ಆದ್ರೆ...!'

'ಏನೂ ಆಗಲ್ಲ ದೇವ್ರು. ನೀನ್ ಸುಮ್ನುಮ್ನೆ ಗಾಬರಿಯಾಗ್ಬೇಡ. ಹೊನ್ನಳ್ರಾಯ ಇದ್ದಾನೆ. ಆತನೇ ನಮನ್ನಾಪಾಡೋದು. ಸುಮ್ನೇ ಮಲಿಕ್ಕೊ. ಮುಂಜಾನೆ ಡಾಕ್ಟ್ರ ಹತ್ರ ಖಂಡಿತ ಹೋಗೋಣ.' ಅಪ್ಪನ ಸಾಂತ್ವನ.

ಉಪ್ಪಿಟ್ಟು ತಿನ್ನಂದ್ರೆ, 'ಬ್ಯಾಡ ಕಾಫಿ ಮಾಡಿಕೊಡ್ರಿ' ಅಂದ್ಲು. ಕಾಫಿ ಕುಡುದು ಮಲಗಲು ಹಾಸಿಗೆ ಸರಿಮಾಡಿಕೊಂಡಳು.

**ಒಂದಿಬ್ಬರು ಹುಚ್ಚು ಹೆಣ್ಣುಮಕ್ಕಳು ನನ್ನ ಕಡೇನೇ ಧಾವಿಸಿ ಬರತೊಡಗಿದರು. ಅದರಲ್ಲೊಬ್ಬು ಗುಜ್ಜಾನೆ ಮರಿ ಓಡಿ ಬಂದು ನನ್ನ ಬಲವಾಗಿ ತಬ್ಬಿಕೊಂಡು ಮೈಪರಚತೊಡಗಿದಳು.**

'ಈಗ ಉಸುರು ತಗೊಂಡ್ರೆ ಕೆಮ್ಮಿದ್ರೆ ಒಳಗೇನೂ ನೋವಾಗಲ್ಲ. ಆರಾಮಾಗ್ತದೆ ಅನಿಸ್ತದೆ. ನಾ ಮಲಗ್ತೀನಿ, ಎಲ್ಲಾ ಮಲಗ್ರಿ' ಎಂದು ಹಾಗೇ ನಿದ್ದೆಗೆ ಜಾರಿದ್ಲು. . .

ಕೆಲವು ವರ್ಷಗಳ ಕೆಳಗೆ ಅಮ್ಮನಿಗೆ ವಿಪರೀತ ಕೆಮ್ಮಾದಾಗ ಜನ ಕ್ಷಯ ಅಂತ ಹುಟ್ಟಿಸಿದ್ರು. ಆಗ ಅಪ್ಪ ಅಮ್ಮನ್ನ ಸ್ಯಾನಿಟೋರಿಯಮ್‌ಗೆ ಕರಕೊಂಡ್ಹೋಗಿ ತೋರಿಸಿದ್ದು ಟೆಸ್ಟ್ ರಿಪೋರ್ಟ್ ನೆಗೆಟಿವ್ ಅಂತ ಬಂದದ್ದು ಇನ್ನೊಮ್ಮೆ ಭರ್ರನೆ ತಿರುಗ್ತಿರೋ ಫ್ಯಾನಿನಲ್ಲಿ ಗೊತ್ತಾಗದೆ ಬೆರಳಿರಿಸಿ ಕಿರುಬೆರಳು ಝಕಂ ಆದಾಗ ಅಪ್ಪ ಇನ್ನಿಲ್ಲದ ಕಾಳಜಿ ವಹಿಸಿದ್ದು ಇವೆಲ್ಲ ನೆನಪಾಗ್ತಿದ್ದಂತೆ ನಂಗೆ ನಿದ್ರೆ ಆವರಿಸಿತ್ತು...

ಆಸ್ಪತ್ರೆ ಕಾಂಪೋಂಡು. ನಾನು ಬಡಬಡ ಹೋಗ್ತಿದ್ದೀನಿ. ಅಪ್ಪ ಹಿಂದಿನಿಂದ ಬರ್ತಿದ್ದಾರೆ. ಆಗಲೇ ಆಸ್ಪತ್ರೆಯಲ್ಲಿ ಜನ ಸೇರ್ತಿದ್ದಾರೆ. 'ಡಾಕ್ಟರು' ಅಂದೆ, 'ಒಳಗಿದ್ದಾರೆ' ಅಂತ ಯಾರೋ ಸನ್ನೆ ಮಾಡಿದ್ರು. 'ಅಪ್ಪಾ ಬಡಾನ ಬಾ. ಡಾಕ್ಟ್ರು ಬಂದಾರೆ ಒಳಗೋಗ್ಬಾ!' ಅವಸರಿಸಿದೆ.

'ರೀ ಸ್ವಾಮಿ, ಮುಂಚೆ ಬಂದೋರು ನಾವೆಲ್ಲಿಗ್ಹೋಗ್ಬೇಕು. ಈಗಿನ್ನ ಬಂದೀರಿ. ಆ ಕಡೆ ಕೂಡ್ರಿ...!' ಅಪ್ಪನ್ನ ಹಿಂದೆ ಸರಿಸಿದ್ರು ಕಾದಿದ್ದ ಜನ. ಅಪ್ಪ ಸುಮ್ನೆ ತೆಪ್ಪಗೆ ಕೂತ ಆಕಾಶ ನೋಡ್ತಾ. ಇನ್ನು ಎಷ್ಟೊತ್ತಾಗುತ್ತೊ, ಡಾಕ್ಟ್ರನ್ನ ಯಾವಾಗ ಕಾಣ್ತೇವೋ. ಅಮ್ಮ ಬೇರೆ ಮತ್ತೆ ಮುಂಜಾನೆ ಎದೆನೋವು ಅಂತಿದ್ಲು ಅಂತ ಚಡಪಡಿಕೆ ಶುರವಾಯ್ತು. ಅಲ್ಲಿ ಸುಮ್ಮನೇ ನಿಲ್ಲಲಾಗದೆ ಹಾಗೇ ಕಾಲಾಡಿಸ್ಕೊಂಡು ಹೊರಟಾಗ ಅಲ್ಲಿ ಬೆಂಚೊಂದರ ಮೇಲೆ ನನ್ನ ಫ್ರೆಂಡ್ ತಾರಿ ಕೂತಾನೆ! ಅವನ ಬೇಸರದ ಮುಖ ನೋಡಿ 'ಏನೋ ತಾರಾನಾಥ್ ನೀನಿಲ್ಲಿ? ಯಾರಿಗೆ ಏನು?' ಕೇಳಿದೆ. 'ಇಲ್ನೋಡು ಇವ್ಳು ಸುಮ್ನೆ ಕೂಡ್ಲಾರ್ದೆ ಮಾಡಿಕೊಂಡಿರೋದು. ಸೈಕಲ್ಮ್ಯಾಲೆ ಸರೀಕ್ಕೂಡ್ಬೇಕಲ್ಲ. ಎಲ್ಲೋ ನೋಡ್ತಾ ಗಾಲ್ಯಾಕಾಲಿಟ್ಟು ಮಾಡ್ಕೊಂಡಾಳ್ನೋಡು...' ತನ್ನ ತಂಗಿಯ ಕಾಲು ತೋರಿಸಿದ. ಅವ್ಳು ನೋವಿನಿಂದ ಅಳ್ತಾ ಕೂತಿದ್ಲು.

'ಅಲ್ಲೋ ಇವಳ ಬ್ಯಾಂಡಜ್ನೋಡಿದ್ರೆ ಗಾಬರಿ ಆಗ್ತದಲ್ಲೊ. ಅಂಥದ್ರಲ್ಲಿ ನೀವು ಅಷ್ಟು ದೂರದಿಂದ ಇಲ್ಲಿಗೆ ಹ್ಯಾಗ್ಬಂದ್ರಿ?! ಕೇಳಿದೆ.'

'ಯಾರೋ ಜಟಕಾದಲ್ಲಿ ಈ ಕಡೆ ಬರ್ತಿದ್ರು. ನಮ್ ಗೋಳಾಟ ನೋಡ್ದೆ ಕರ್ಕಂಬಂದ್ರು' ಅಂತ ಹೇಳಿದ! 'ಸರಿ ಈಗ ಹ್ಯಾಗೋಗ್ತೀರೋ' ಎಂದು ಕೇಳಿದ್ದಕ್ಕೆ 'ಬಾಡಿಗೆ ಸೈಕಲ್ಮ್ಯಾಲೆ ಇವಳನ್ನ ಬಿಟ್ಬರ್ತೀನಿ ಅಂದ'.

'ಜ್ವಾಕಿನೋ ಮಹರಾಯ, ಗಾಲ್ಯಾಗಿನೊಂದ್ಕಾಲ್ ಇಟ್ಗಿಟ್ಯಾಳು...' ಅಂದೆ. ಇಬ್ಬರೂ ನಗತೊಡಗಿದೆವು. ಅವಳು ಅಳು ಇನ್ನಷ್ಟು ಜೋರು ಮಾಡಿದ್ಲು. ನಾನು ಅವಳ ಕಣ್ಣೊರಿಸಿ ಈಚೆ ಬಂದೆ.

ಆಮೇಲೆ ಅಮ್ಮ ಇದ್ದಕ್ಕಿದ್ದ ಹಾಗೆ ನೆನಪಾಗಿ ಅಪ್ಪಗೆ ತನ್ನ ಸರದಿ ಬಂತೇನೋ ಅಂತ ನೋಡಹೋದವನು ಅಲ್ಲಿ ಅಪ್ಪ ಕಾಣದೆ ಒಳಗೋಗಿರಬೇಕೆಂದು ನಾನೂ ಒಳಗೋದೆ. ಅಲ್ಲಿ ತಲೆ ಕೆದರಿಕೊಂಡು ಕೂದಲು ಬಿರು ಹೊಯ್ದುಕೊಂಡ ಒಂದಿಬ್ಬರು ಹುಚ್ಚು ಹೆಣ್ಣುಮಕ್ಕಳು ಹುಚ್ಚುಚ್ಚಾಗಿ ನಗ್ತಾ ನನ್ನ ಕಡೇನೇ ಧಾವಿಸಿ ಬರತೊಡಗಿದರು. ಅದರಲ್ಲೊಬ್ಬು ಗುಜ್ಜಾನೆ ಮರಿ ಓಡಿ ಬಂದು ನನ್ನ ಬಲವಾಗಿ ತಬ್ಬಿಕೊಂಡು ಮೈಪರಚತೊಡಗಿದಳು. ಅವಳ ಆಕ್ರಮಣಕ್ಕೆ ಕಿಟಾರನೆ ಕಿರುಚಿಕೊಂಡ ನಾನು ಭೋಂಕನೆ ಕಣ್ತೆರೆದು ಹಾಸಿಗೆ ಮೇಲೆದ್ದು ಕುಳಿತುಕೊಂಡೆ...

ಅಲ್ಲಿದ್ದವರೆಲ್ಲ 'ಏನಾಯ್ತಪ್ಪ ನಿಮ್ಮಮ್ಮಗೆ. ಅದೇ ಧ್ಯಾನದಲ್ಲಿ ಮಲಗಿದ್ಯೇನೋ...' ಎಂದು ನಗುತ್ತಾ 'ಕನಸೇನೋ ರಾತ್ರಿಯೆಲ್ಲ ದುಃಖಿಸಿತಿದ್ಯಪ್ಪ... ಏಳು ಏಳು' ಎಂದರು.

ಬಾಗಿಲಲ್ಲಿ ಆಗ ತಾನೇ ದೇವಸ್ಥಾನದಿಂದ ಬಂದು ನಗುತ್ತಾ ನಿಂತಿದ್ದ ಅಮ್ಮ ಕಂಡಳು. ಒಂದು ಕ್ಷಣ ನನ್ನ ಕಣ್ಣೆದುರು ದೇವರೇ ಪ್ರತ್ಯಕ್ಷವಾದಂತೆ ಭಾಸವಾಯಿತು. ಹತ್ತಿರ ಬಂದು ಅವಳು ನನ್ನ ತಲೆ ಸವರಿ, 'ಹುಚ್ಚು ಹುಡುಗ ನಿಂದು ಅತಿಯಾಯ್ತು. ಸಾಕೇಳು' ಎನ್ನುತ್ತಾ ಅಡುಗೆಮನೆ ಕಡೆ ಹೋದಳು. ನಾನು ಹಿಂಬಾಲಿಸಿದೆ. ■